ಸಾಕ್ಷಿಯನ್ನು ದಿನಾಂಕ 02-07-2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿಯರ/ಎದುರುದಾರ ಪರ ಶ್ರೀ ಬಿ.ಎಸ್. ವಕೀಲರಿಂದಃ**

ನಾನು ಎಂ.ಟೆಕ್. ಪದವಿದರ. ನಾನು ಚಿಕ್ಕವನಿಂದಲೂ ನನ್ನ ತಾಯಿ ಬಳಿ ಇದ್ದೆ ಎನ್ನುವುದು ಸರಿ. ನನ್ನ ತಾಯಿ 1 ನೇ ಪ್ರತಿವಾದಿ ಮಲ್ಲೆಶಪ್ಪನ ವಿರುದ್ಧ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದಳು ಎನ್ನುವುದು ಸರಿ. ನನ್ನ ಅಜ್ಜನ ಹೆಸರು ಫಕೀರಪ್ಪ ಎನ್ನುವುದು ಸರಿ. ನನ್ನ ಅಜ್ಜ ಫಕೀರಪ್ಪ ತನ್ನ ಜೀವಿತಾವಧಿಯಲ್ಲಿ ಮೂವರನ್ನು ಮದುವೆಯಾಗಿದ್ದ. ನನ್ನ ಅಜ್ಜ ಮದುವೆಯಾಗಿದ್ದ ಸದರಿ ಮೂರು ಜನರ ಹೆಸರುಗಳೆಂದರೆ ರತ್ನಮ್ಮ, ಲಕ್ಷ್ಮಿಬಾಯಿ ಮತ್ತು ಗೌರಮ್ಮ. ಅಸಲು ದಾವಾ 24/1996 ರನ್ನು ಮೂಲತಃ ನನ್ನ ಅಜ್ಜ ಬದುಕಿದ್ದಾಗ ಆತನ ವಿರುದ್ಧ ದಾಖಲಿಸಲಾಗಿತ್ತು ಎನ್ನುವುದು ಸರಿ.

ನನ್ನ ಅಜ್ಜನ ಮೂವರು ಹೆಂಡತಿಯರ ಪೈಕಿ ರತ್ನಮ್ಮ ಮತ್ತು ಗೌರಮ್ಮಳಿಗೆ ಮಕ್ಕಳಿದ್ದು ಲಕ್ಷ್ಮಿಬಾಯಿಗೆ ಮಕ್ಕಳಿರುವುದಿಲ್ಲ. ರತ್ನಮ್ಮನಿಗೆ ರಾಯಪ್ಪ ಎಂಬ ಒಬ್ಬನೆ ಮಗನಿದ್ದಾನೆ. ಗೌರಮ್ಮಳಿಗೆ ನನ್ನ ತಂದೆ ಮಲ್ಲೇಶಪ್ಪ, ನನ್ನ ಚಿಕ್ಕಪ್ಪ ಬೀರಪ್ಪ ಮತ್ತು ನನ್ನ ಅತ್ತೆ ನಾಗಮ್ಮ ಮೂವರು ಮಕ್ಕಳು.

ನನ್ನ ಅಜ್ಜ ಫಕೀರಪ್ಪನಿಗೆ ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿ ಅಸಲು ದಾವಾ 24/1996 ಅನ್ನು ಸಲ್ಲಿಸುವ ಕಾಲಕ್ಕೆ ನನ್ನ ಅಜ್ಜನಿಗೆ 44 ಎಕರೆ ಜಮೀನು ಇತ್ತು ಎನ್ನುತ್ತಾರೆ. ಫಕೀರಪ್ಪ ಬದುಕಿದ್ದಾಗ ಸದರಿ 44 ಎಕರೆ ಜಮೀನಿನ ಮಾಲಿಕ ಮತ್ತು ಕಬ್ಜೆದಾರನಾಗಿದ್ದ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ಅಜ್ಜ ಮತ್ತು ಅವರ ಸಹೋದರಿಯರಿಗೆ ಸದರಿ 44 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿತ್ತು ಎನ್ನುತ್ತಾರೆ. ನನ್ನ ಅಜ್ಜ ಫಕೀರಪ್ಪ ಬದುಕಿದ್ದಾಗ ಸ.ನಂ.31 ರಲ್ಲಿನ 16 ಎಕರೆ ಜಮೀನಿನ ಸ್ವಾಧೀನದಲ್ಲಿದ್ದರು. ನನ್ನ ಅಜ್ಜ ತನ್ನ ಜೀವಿತಾವಧಿಯಲ್ಲಿ ಸದರಿ 16 ಎಕರೆ ಜಮೀನಿಗೆ ಮಾತ್ರ ಮಾಲಿಕ ಮತ್ತು ಕಬ್ಜೆದಾರನಾಗಿದ್ದ ಎಂದರೆ ಸರಿ.

ನನ್ನ ಅಜ್ಜನಿಗೆ ಕೇವಲ 16 ಎಕರೆ ಜಮೀನು ಇದ್ದರು ಸಹ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟು ಅಸಲು ದಾವಾ 24/1996 ರಲ್ಲಿ ಸುಳ್ಳು ಪ್ರಾಥಮಿಕ ಡಿಕ್ರಿ ಪಡೆದಿದ್ದೇವೆ ಎನ್ನುವುದು ಸರಿಯಲ್ಲ.

ಈ ಅರ್ಜಿಯಲ್ಲಿ 5 ನೇ ಎದುರುದಾರ ಶ್ಯಾಮಸುಂದರನನ್ನು ಯಾವ ಕಾರಣಕ್ಕೆ ಪಕ್ಷಗಾರನನ್ನಾಗಿ ಸೇರಿಸಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ 5 ಎಕರೆ ಚಿಲ್ಲರೆ ಗುಂಟೆ ಜಮೀನನ್ನು ಸದರಿ ಶ್ಯಾಮಸುಂದರನ ಹೆಸರಿಗೆ ಮಾಡಿರುವುದರಿಂದ ಆತನನ್ನು ಈ ಅರ್ಜಿಯಲ್ಲಿ ಸೇರಿಸಿದ್ದೇನೆ ಎನ್ನುತ್ತಾರೆ. ಸದರಿ ಶ್ಯಾಮಸುಂದರನಿಗೆ 5 ಎಕರೆ ಚಿಲ್ಲರೆ ಗುಂಟೆ ಜಮೀನನ್ನು ಯಾವ ರೂಪದಲ್ಲಿ ಕೊಡಲಾಗಿದೆ ಎಂದು

ನನ್ನ ಅರ್ಜಿಯಲ್ಲಿ ಬರೆಸಿದ್ದೇನೆ. ಶ್ಯಾಮಸುಂದರನಿಗೆ ಯಾವ ರೀತಿ ಸದರಿ ಆಸ್ತಿಯನ್ನು ಕೊಡಲಾಗಿದೆ ಎಂದರೆ ಸಾಕ್ಷಿ ಗಂಗಮ್ಮ ಎಂಬುವವರ ಹೆಸರಿನಿಂದ ಶ್ಯಾಮಸುಂದರನ ಹೆಸರಿಗೆ ಸದರಿ 5 ಎಕರೆ ಚಿಲ್ಲರೆ ಗುಂಟೆ ಜಮೀನನ್ನು ಮುಟೇಷನ್ ಮಾಡಲಾಗಿದೆ ಎನ್ನುತ್ತಾರೆ. ಗಂಗಮ್ಮನಿಂದ ಶ್ಯಾಮಸುಂದರನ ಹೆಸರಿಗೆ ಯಾವ ಆಧಾರದಲ್ಲಿ ಮುಟೇಷನ್ ಆಗಿದೆ ಎಂದರೆ ಸಾಕ್ಷಿ ಗಂಗಮ್ಮ ತಿರಿಕೊಂಡ ನಂತರ ಶ್ಯಾಮಸುಂದರನ ಹೆಸರಿಗೆ ಮುಟೇಷನ ಆಗಿದೆ ಎನ್ನುತ್ತಾರೆ.

ಗಂಗಮ್ಮ ಮತ್ತು ಶ್ಯಾಮಸುಂದರನ ನಡುವೆ ಏನು ಸಂಬಂಧ ಇತ್ತು ಎಂದರೆ ಸಾಕ್ಷಿ ಗಂಗಮ್ಮ ನನ್ನ ಮುತ್ತ್ಯಾ ಫಕೀರಪ್ಪನ ಅಕ್ಕ ಎನ್ನುತ್ತಾರೆ. ಗಂಗಮ್ಮನಿಗೆ 5 ಎಕರೆ ಚಿಲ್ಲರೆ ಗುಂಟೆ ಜಮೀನು ಯಾವ ರೀತಿ ಬಂದಿತು ಎಂದು ನನಗೆ ಗೊತ್ತಿಲ್ಲ. ಗಂಗಮ್ಮನಿಂದ ಸದರಿ ಆಸ್ತಿ ದಾನ ಪತ್ರದ ಮೂಲಕ ಶ್ಯಾಮಸುಂದರನಿಗೆ ವರ್ಗಾವಣೆ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಗಂಗಮ್ಮನ ಹೆಸರಿನಿಂದ ಶ್ಯಾಮಸುಂದರನಿಗೆ ಜಮೀನಿನ ಖಾತೆ ವರ್ಗಾವಣೆ ಆದ ಮುಟೇಷನ್ ಆದೇಶವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಸದರಿ ಆಸ್ತಿಯಲ್ಲೂ ನಮಗೆ ಪಾಲು ಇದೆ ಎಂದು ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಎನ್ನುವುದು ಸರಿಯಲ್ಲ.

5 ನೇ ಎದುರುದಾರ ಶ್ಯಾಮಸುಂದರನಿಗೆ ಸಂಬಂಧಪಟ್ಟ ಹೊಲದಲ್ಲಿ ಈ ಅರ್ಜಿಯ ಇತರೇ ಪಕ್ಷಗಾರರಿಗೆ ಹಕ್ಕು ಅಧಿಕಾರ ಇಲ್ಲ ಎನ್ನುವುದು ಸರಿಯಲ್ಲ.

ಈ ಅರ್ಜಿಯಲ್ಲಿ 4 ನೇ ಎದುರುದಾರಳಾಗಿ ಶಂಕ್ರಮ್ಮ ಎಂಬುವವಳನ್ನು ಯಾವ ಉದ್ದೇಶಕ್ಕೆ ಸೇರಿಸಿದ್ದೀರಿ ಎಂದರೆ ಸಾಕ್ಷಿ ನಮ್ಮ ತಂದೆ ಮಲ್ಲೇಶಪ್ಪ ನಮ್ಮ ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಶಂಕ್ರಮ್ಮಳ ಹೆಸರಿಗೆ ಜಮೀನು ಖರೀದಿಸಿರವುದರಿಂದ ಆಕೆಯನ್ನು ಪಕ್ಷಗಾರಳನ್ನಾಗಿ ಮಾಡಿದ್ದೇವೆ ಎನ್ನುತ್ತಾರೆ. ಶಂಕ್ರಮ್ಮಳ ಮಕ್ಕಳೆಲ್ಲರೂ ಒಕ್ಕಲುತನ ಮಾಡುತ್ತಾರೆ ಎಂದರೆ ಸಾಕ್ಷಿ ವಿದ್ಯಾಭಾಸ ಮಾಡುತ್ತಿದ್ದಾರೆ ಎನ್ನುತ್ತಾರೆ. ಶಂಕ್ರಮಳಿಗೆ ಎಷ್ಟು ಜನ ಮಕ್ಕಳಿದ್ದಾರೆ ಮತ್ತು ಯಾರಾರು ಏನೇನು ಹಾಗೂ ಏಲ್ಲಿ ಓದುತಿದ್ದಾರೆ ಎಂದರೆ ಸಾಕ್ಷಿ ಶಂಕ್ರಮಳಿಗೆ 4 ಜನ ಮಕ್ಕಳಿದ್ದಾರೆ, ಅವರು ಏಲ್ಲಿ ಮತ್ತು ಏನೇನು ಓದುತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಅರ್ಜಿಯಲ್ಲಿ ಶಂಕ್ರಮ್ಮಳ 4 ಜನ ಮಕ್ಕಳ ಪೈಕಿ ಒಬ್ಬರನ್ನು ಮಾತ್ರ ಸೇರಿಸಿದ್ದೇವೆ ಎನ್ನುವುದು ಸರಿ.

ನಿಮ್ಮ ತಂದೆ ಮಲ್ಲೇಶಪ್ಪನಿಗೆ ವಾರ್ಷಿಕವಾಗಿ ಎಷ್ಟು ಆದಾಯವಿತ್ತು ಮತ್ತು ಖರ್ಚು ಎಷ್ಟಿತ್ತು ಎಂದರೆ ಸಾಕ್ಷಿ 300 ರಿಂದ 400 ಚೀಲ ತೊಗರಿ ಮತ್ತು ಸುಮಾರು 100 ಚೀಲ ಉದ್ದು ಮತ್ತು ಹೆಸರು

ಬೆಳೆಯುತ್ತಿದ್ದರು ಮತ್ತು ನನ್ನ ತಂದೆಯ ಇಬ್ಬರು ಹೆಂಡತಿಯರಿಗೆ ಇದ್ದ ಒಟ್ಟು 6 ಜನ ಮಕ್ಕಳ ಖರ್ಚು ಮತ್ತು ನಮ್ಮ ಕುಟುಂಬದ ವೆಚ್ಚಕಾಗಿ ಸುಮಾರು 200 ಚೀಲ ತೊಗರಿ ಅಗತ್ಯವಿತ್ತು ಎನ್ನುತ್ತಾರೆ. ನಿಮ್ಮ ಊರಿನಲ್ಲಿ ಪ್ರತಿ ಎಕರೆಗೆ ಎಷ್ಟು ಚೀಲ ಬೆಳೆ ತೆಗೆಯಬಹುದು ಎಂದರೆಸಾಕ್ಷಿ ಸಾಮಾನ್ಯವಾಗಿ 6 ರಿಂದ 8 ಚೀಲ ಬೆಳೆ ತೆಗೆಯಬಹುದು, ನನ್ನ ತಂದೆಗೆ ನಿರಾವರಿ ಜಮೀನು ಇದ್ದಿದ್ದರಿಂದ ಹೆಚ್ಚು ಬೆಳೆ ತೆಗೆಯುತ್ತಿದ್ದರು ಎನ್ನುತ್ತಾರೆ. ಕಳೆದ ವರ್ಷ ಅತಿವೃಷ್ಟಿಯಿಂದ ನನ್ನ ತಂದೆ ಕೇವಲ 12 ಚೀಲ ಉದ್ದು ಮತ್ತು ಹೆಸರು ಬೆಳೆದಿದ್ದಾರೆ ಎನ್ನುವುದು ಸರಿಯಲ್ಲ.

ನೀವು ವಯಸ್ಕನಾದ ನಂತರ ಇಲ್ಲಿಯವರೆಗೆ ನಿಮ್ಮ ತಂದೆ 300 ರಿಂದ 400 ಚೀಲ ತೊಗರಿ ಮತ್ತು ಸುಮಾರು 100 ಚೀಲ ಉದ್ದು ಮತ್ತು ಹೆಸರು ಬೆಳೆಯುತ್ತಿದ್ದರು ಎಂಬುದನ್ನು ತೊರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ನಿಮ್ಮ ತಂದೆ ನೀವು ಹೇಳುತ್ತಿರುವಷ್ಟು ಪ್ರಮಾಣದ ತೊಗರಿ, ಉದ್ದು ಅಥವಾ ಹೆಸರು ಬೆಳೆದಿರುವುದಿಲ್ಲ ಆದ್ದರಿಂದಲೇ ಯಾವುದೇ ದಾಖಲೆ ಇಲ್ಲ ಎನ್ನುವುದು ಸರಿಯಲ್ಲ.

4 ನೇ ಎದುರುದಾರಳಾದ ಶಂಕ್ರಮ್ಮಳ ಹೆಸರಿಗೆ ಖರೀದಿಸಿರುವ ಆಸ್ತಿಯ ಕ್ರಯಪತ್ರದಲ್ಲಿ ಆಕೆಯ ತಂದೆ ಹೆಸರು ಬುಗ್ಗಪ್ಪ , ವಾಸ ಹಾಬಾಳ ಟಿ, ಸೇಡಂ ತಾಲೂಕು ಎಂದು ನಮೂದು ಇದೆ ಮತ್ತು ನಿಮ್ಮ ತಂದೆ ಮಲ್ಲೇಶಪ್ಪನ ಹೆಸರು ಇಲ್ಲ ಎಂದರೆ ಸಾಕ್ಷಿ ಕಾನೂನು ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಆಕೆಯ ತಂದೆಯ ಹೆಸರು ಸೇರಿಸಲಾಗಿದೆ ಎನ್ನುತ್ತಾರೆ. ಶಂಕ್ರಮ್ಮಳ ತಂದೆ ಜಮೀನನ್ನು ಖರೀದಿ ಮಾಡಿ ಶಂಕ್ರಮ್ಮಳ ಹೆಸರಿಗೆ ಮಾಡಿಸಿರುವುದರಿಂದ ಕ್ರಯ ಪತ್ರದಲ್ಲಿ ಬುಗ್ಗಪ್ಪನ ಹೆಸರು ಇದೆ ಮತ್ತು ನಿಮ್ಮ ತಂದೆಯ ಹೆಸರು ಇಲ್ಲ ಎಂದರೆ ಸಾಕ್ಷಿ ಶಂಕ್ರಮ್ಮಳ ತಂದೆ ಕೂಲಿ ಮಾಡುತ್ತಿದ್ದರು ಮತ್ತು ಅವರಿಗೆ 15 ಎಕರೆ 30 ಗುಂಟೆ ಜಮೀನನ್ನು ಖರೀದಿ ಮಾಡುವ ಸಾಮರ್ಥ ವಿರಲಿಲ್ಲ ಹಾಗೂ ನನ್ನ ತಂದೆ ನಮ್ಮ ಒಟ್ಟು ಕುಟುಂಬದ ಆದಾಯದಿಂದ ಸದರಿ 15 ಎಕರೆ 30 ಗುಂಟೆ ಜಮೀನನ್ನು ಶಂಕ್ರಮ್ಮಳ ಹೆಸರಿಗೆ ಖರೀದಿಸಿ ಅದನ್ನು ಮರೆಮಾಚುವ ಸಲುವಾಗಿ ಬುಗ್ಗಪ್ಪನ ಹೆಸರನ್ನು ಕ್ರಯ ಪತ್ರದಲ್ಲಿ ತೊರೀಸಿದ್ದಾರೆ ಎನ್ನುತ್ತಾರೆ. ಸದರಿ 15 ಎಕರೆ 30 ಗುಂಟೆ ಜಮೀನು ಶಂಕ್ರಮ್ಮಳ ಸ್ತ್ರೀ-ಧನ ಸ್ವತ್ತು ಆಗಿದ್ದು ಕಾನೂನು ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಆಕೆಯ ತಂದೆಯ ಹೆಸರನ್ನು ಕ್ರಯ ಪತ್ರದಲ್ಲಿ ಸೇರಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಸ.ನಂ.34 ರಲ್ಲಿರುವ 4 ಎಕರೆ 4 ಗುಂಟೆ ಆಸ್ತಿ 6 ನೇ ಎದುರುದಾರಳಾದ ನಾಗಮ್ಮಳಿಗೆ ಸೇರಿದ್ದು

ಎನ್ನುವುದು ಸರಿ. ಸದರಿ ಆಸ್ತಿಗೂ ಈ ಅರ್ಜಿಯ ಇತರೇ ಪಕ್ಷಗಾರರಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಸದರಿ ಆಸ್ತಿ ನಾಗಮ್ಮಳಿಗೆ ಹೇಗೆ ಬಂತು ಎಂದರೆ ಸಾಕ್ಷಿ ನಾನು ಚಿಕ್ಕವನಿದ್ದಾಗಲೇ ಸದರಿ ಆಸ್ತಿ ನಾಗಮ್ಮಳಿಗೆ ಬಂದಿದ್ದು, ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾಗಮ್ಮ ಹೂವಿನಹಳ್ಳಿ ಗ್ರಾಮದಲ್ಲೆ ಇರುತ್ತಾಳೆ ಎನ್ನುವುದು ಸರಿ. 4 ಎಕರೆ 4 ಗುಂಟೆ ಆಸ್ತಿಯನ್ನು ನನ್ನ ಅಜ್ಜ ಫಕೀರಪ್ಪನ ಸೊದರಿ ಗೌರಮ್ಮ ನಾಗಮ್ಮಳಿಗೆ ದಾನ ಪತ್ರದ ಮೂಲಕ ಕೊಟ್ಟಿದ್ದಾಳೆ ಎನ್ನುವುದು ಸರಿ. ಆ ರೀತಿ ನಾಗಮ್ಮಳಿಗೆ ದಾನವಾಗಿ ಕೊಟ್ಟಿರುವ ಆಸ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

ಗೌರಮ್ಮಳಿಗೆ ಆಕೆಯ ಸಹೋದರ ಫಕೀರಪ್ಪನೊಂದಿಗಿನ ಪಾಲಿನಲ್ಲಿ ಬಂದ ಆಸ್ತಿಯನ್ನು 5 ನೇ ಎದುರುದಾರ ಶ್ಯಾಮಸುಂದರ ಮತ್ತು 6 ನೇ ಎದುರುದಾರಳಾದ ನಾಗಮ್ಮಳಿಗೆ ದಾನ ಮಾಡಿದ್ದಾಳೆ ಎನ್ನುವುದು ನನಗೆ ಗೊತ್ತಿಲ್ಲ.

ಸ.ನಂ.43/1 ರಲ್ಲಿರುವ 3 ಎಕರೆ 3 ಗುಂಟೆ ಜಮೀನನ್ನು 6 ನೇ ಎದುರುದಾರಳಾದ ನಾಗಮ್ಮ ನಿಡಗುಂದಾ ಗ್ರಾಮದ ಶಂಕ್ರಪ್ಪ ಎಂಬುವವನಿಂದ ಖರೀದಿಸಿದ್ದಳು ಎನ್ನುವುದು ಸುಳ್ಳು ಸಾಕ್ಷಿ ಸ್ವ-ಇಚ್ಛೆಯಿಂದ ನಮ್ಮ ತಂದೆ ಖರೀದಿಸಿ ನಾಗಮ್ಮಳ ಹೆಸರಿಗೆ ಕ್ರಯ ಪತ್ರ ಮಾಡಿಸಿದ್ದಾರೆ ಎನ್ನುತ್ತಾರೆ. ನಾಗಮ್ಮ ಸರಕಾರಿ ನೌಕರಿಯಲ್ಲಿದ್ದಾಳೆ ಎಂದರೆ ಸಾಕ್ಷಿ ಅಂಗನವಾಡಿ ಕಾರ್ಯಕರ್ತೆ ಎನ್ನುತ್ತಾರೆ. ನಾಗಮ್ಮ ಖರೀದಿಸಿರುವ 3 ಎಕರೆ 3 ಗುಂಟೆ ಜಮೀನಿಗೂ ನಮಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

ನಮ್ಮ ತಂದೆಯವರ ಬಳಿ ಆಡೂ-ಕುರಿ ಇತ್ತು ಮತ್ತು ಈಗಲೂ ಇದೆ ಎನ್ನುವುದು ಸರಿಯಲ್ಲ. ಸ.ನಂ.43 ರಲ್ಲಿರುವ 10 ಎಕರೆ ಜಮೀನನ್ನು 2 ನೇ ಎದುರುದಾರ ಬೀರಪ್ಪ ನಿಡಗುಂದದ ಶಂಕ್ರಪ್ಪನಿಂದ ಖರೀದಿ ಮಾಡಿದ ಎಂದರೆ ಸಾಕ್ಷಿ ಸದರಿ ಆಸ್ತಿಯನ್ನು ಸಹ ನಮ್ಮ ತಂದೆ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿ ಬೀರಪ್ಪನ ಹೆಸರಿಗೆ ಕ್ರಯ ಪತ್ರ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ಸಹ ನಮ್ಮ ತಂದೆ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿ ಬೀರಪ್ಪನ ಹೆಸರಿಗೆ ಕ್ರಯ ಪತ್ರ ಮಾಡಿದ್ದಾರೆ ಎಂಬುದನ್ನು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಮುಂದೆ ವಿವಾದವಾದರೆ ಕೊಡುತ್ತೇನೆ ಎನ್ನುತ್ತಾರೆ.

ನಮ್ಮ ತಂದೆ ಮಲ್ಲೇಶಪ್ಪ ನನ್ನ ತಾಯಿ ಮತ್ತು ನಮಗೆ ಜೀವನಾಂಶ ಕೊಡಬೇಕಾಗಿದ್ದರಿಂದ ಆತ

ತನ್ನ ಹೆಸರಿಗಾಗಲಿ ಅಥವಾ ಬೇರೆಯವರ ಹೆಸರಿಗಾಗಲಿ ಆಸ್ತಿ ಖರೀದಿವಷ್ಟು ಶಕ್ತಿವಂತನಾಗಿರಲಿಲ್ಲ ಎನ್ನುವುದು ಸುಳ್ಳು.

ನಿಮ್ಮ ಊರಿನಲ್ಲಿ ಪ್ರತಿ ಎಕರೆ ಜಮೀನಿನ ಬೆಲೆ ಪ್ರಸ್ತುತ 3 ರಿಂದ 4 ಲಕ್ಷ ಇದೆ. 2016 ನೇ ಇಸವಿಯಲ್ಲಿ ಪ್ರತಿ ಎಕರೆ ಜಮೀನಿನ ಅಂದಾಜು ಬೆಲೆ ಎಷ್ಟಿತ್ತು ಎನ್ನುವುದು ನನಗೆ ಗೊತ್ತಿಲ್ಲ.

ಸ.ನಂ.70/2 ರ ಮಾರುಕಟ್ಟೆ ಬೆಲೆ 2016 ನೇ ಇಸವಿಯಲ್ಲಿ ಪ್ರತಿ ಎಕರೆಗೆ ರೂ.1,50,000/- ಇತ್ತು ಎಂದರೆ ಸರಿ. ಸದರಿ ಸ.ನಂ.70/2 ರಲ್ಲಿನ 5 ಎಕರೆ 30 ಗುಂಟೆ ಜಮೀನನ್ನು ಈ ಅರ್ಜಿಯಲ್ಲಿ ಸೇರಿಸಿದ್ದೇವೆ ಎನ್ನುವುದು ಸರಿ. ಅದೇ ರೀತಿ ಸ.ನಂ.43/1 ಮತ್ತು 34/4 ರ ಬೆಲೆ 2016 ರ ಇಸವಿಯಲ್ಲಿ ಪ್ರತಿ ಎಕರೆಗೆ ರೂ.1,50,000/- ಇತ್ತು ಎಂದರೆ ಸರಿ. ಸದರಿ ಎರಡು ಸರ್ವೆ ನಂಬರಿನಲ್ಲಿನ ಒಟ್ಟು 7 ಎರಕೆ 36 ಗುಂಟೆ ಜಮೀನನ್ನು ಈ ಅರ್ಜಿಯಲ್ಲಿ ಸೇರಿಸಿದ್ದೇವೆ ಎನ್ನುವುದು ಸರಿ. ಅದೇ ರೀತಿ ನಾವು ಈ ಅರ್ಜಿಯಲ್ಲಿ ಹೆಚ್ಚುವರಿಯಾಗಿ ಸೇರಿಸಿರುವ ಸ.ನಂ.58/3, 172, 44 ಮತ್ತು 43 ರ ಜಮೀನಿನ ಬೆಲೆ 2016 ರ ಇಸವಿಯಲ್ಲಿ ಪ್ರತಿ ಎಕರೆಗೆ ರೂ.1,50,000/- ಇತ್ತು ಎಂದರೆ ಸರಿ.

ನಾವು ಈ ಅರ್ಜಿಯಲ್ಲಿ ಹೆಚ್ಚುವರಿಯಾಗಿ ಸೇರಿಸಿರುವ ಮೇಲೆ ಉಲ್ಲೆಖಿಸಲಾಗಿರುವ ಆಸ್ತಿಗಳ ಒಟ್ಟು ಮೌಲ್ಯ ರೂ. 1 ಕೋಟಿಗೂ ಹೆಚ್ಚು ಇದ್ದು ಸದರಿ ಮೌಲ್ಯ ಈ ನ್ಯಾಯಾಲಯದ ಆರ್ಥಿಕ ಅಧಿಕಾರ ವ್ಯಾಪ್ತಿಯನ್ನು ಮೀರಿದೆ ಅಂದರೆ ಸಾಕ್ಷಿ ಆ ಬಗ್ಗೆ ಈಗಾಗಲೆ ನ್ಯಾಯಾಲಯ ಆದೇಶ ಮಾಡಿದೆ ಎನ್ನುತ್ತಾರೆ. ನಾವು ಈ ಅರ್ಜಿಯಲ್ಲಿ ಹೆಚ್ಚುವರಿಯಾಗಿ ಸೇರಿಸಿರುವ ಮೇಲೆ ಉಲ್ಲೆಖಿಸಲಾಗಿರುವ ಆಸ್ತಿಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ ಮತ್ತು ಆ ರೀತಿ ಸಂಬಂಧ ಇದೆ ಎಂದು ತೋರಿಸಲು ದಾಖಲೆ ನಮ್ಮ ಬಳಿ ಇಲ್ಲ ಎನ್ನುವುದು ಸರಿಯಲ್ಲ. ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟರೆ ನಮಗೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು ಅವುಗಳನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ನಾವು ಅಂತಿಮ ಡಿಕ್ರಿಗಾಗಿ ಸಲ್ಲಿಸಿರುವ ಈ ಅರ್ಜಿಯು ಅನಗತ್ಯ ಪಕ್ಷಗಾರರ ಸೇರ್ಪಡೆಯಿಂದ ಮತ್ತು ಅವಶ್ಯಕ ಪಕ್ಷಗಾರರ ಅಸೇರ್ಪಡೆಯಿಂದ ನಿಲ್ಲತಕ್ಕದ್ದಲ್ಲ ಎನ್ನುವುದು ಸರಿಯಲ್ಲ.

ನನ್ನ ಸೊದರತ್ತೆ ನಾಗಮ್ಮ ನಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದಾಳೆ ಎನ್ನುವುದು ಸರಿ. ಸದರಿ ದಾವೆಯ ಆಸ್ತಿಯನ್ನುಈ ಅರ್ಜಿಯಲ್ಲಿ ಸೇರಿಸಿಲ್ಲ ಎನ್ನುವುದು ಸರಿ. ನ್ಯಾಯಾಲಯದ ಪ್ರಾಥಮಿಕ ಡಿಕ್ರಿಯನ್ನು ಮೀರಿ ಹೆಚ್ಚುವರಿ ಆಸ್ತಿಯನ್ನು ಸೇರಿಸಿ ನಾವು ಸಲ್ಲಿಸಿರುವ ಈ

ಅರ್ಜಿ ಊರ್ಜಿತವಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನ್ಯಾಯಾಲಯ ಆದೇಶ ಮಾಡಲಾಗಿದೆ ಎನ್ನುತ್ತಾರೆ. ನನ್ನ ತಂದೆ ಯಾವ ಆದಾಯದಿಂದ ಆಸ್ತಿ ಖರೀದಿಸಿದ್ದರು ಎಂಬುದನ್ನು ತೋರಿಸುವ ದಾಖಲೆಯನ್ನು ನಾನು ಕೊಟ್ಟಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಗೆ ವ್ಯವಸಾಯವೇ ಮೂಲ ಆದಾಯ ಎನ್ನುತ್ತಾರೆ. ವ್ಯವಸಾಯದಿಂದ ಗಳಿಸಿದ ಆದಾಯದಲ್ಲಿ ನಮ್ಮ ತಂದೆ 1 ಗುಂಟೆ ಆಸ್ತಿಯನ್ನು ಸಂಪಾದಿಸಿಲ್ಲ ಎಂದರೆ ಸಾಕ್ಷಿ ಕಾನೂನಿನ ಕಣ್ಣು ತಪ್ಪಿಸಲು ಬೇರೆಯವರ ಹೆಸರಿಗೆ ಆಸ್ತಿ ಖರೀದಿಸಿದ್ದಾರೆ ಎನ್ನುತ್ತಾರೆ. ಸುಳ್ಳು ಅರ್ಜಿ ಮತ್ತು ಶಪಥ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**